# ಸಮಾಜ ವಿಜ್ಞಾನ ಮಾದರಿ ಪ್ರಶ್ನಾ ಪತ್ರಿಕೆ -6

ಅ.ನಾಲ್ಕು ಪರ್ಯಾಯ ಉತ್ತರಗಳನ್ನು ಕೊಡಲಾಗಿದೆ. ಸೂಕ್ತವಾದುದನ್ನು ಆರಿಸಿ ಬರೆಯಿರಿ.1*10=10

1.ಸರ್ವೋಚ್ಚನ್ಯಾಯಾಲಯವನ್ನು ಸ್ಥಾಪನೆಗೆ ಕಾರಣವಾದ ಶಾಸನ __________

A. 1935 ರ ಶಾಸನ
B. 1861 ರ ಶಾಸನ
C. 1773 ರ ಶಾಸನ
D. 1784 ರ ಶಾಸನ

2.ಭಾರತದ ಉಕ್ಕಿನ ಮನುಷ್ಯ ಎಂದು ಖ್ಯಾತಿಯಾಗಿದ್ದ ಭಾರತದ ಪ್ರಥಮ ಗೃಹ ಮಂತ್ರಿ_________

A. ಜವಾಹರಲಾಲ್ ನೆಹರು
B. ಗಾಂಧೀಜಿ
C. ಬಾಲಗಂಗಾಧರ ತಿಲಕ್
D. ಸರ್ದಾರ್ ವಲ್ಲಭಾ ಬಾಯಿ ಪಟೇಲ್

3.ಭಾರತಕ್ಕೆ 1962 ರ ಚೀನಾ ಆಕ್ರಮಣ ಸಂದರ್ಬದಲ್ಲಿಯೂ ಅಮೇರಿಕಾದ ಸಹಾಯದಿಂದ _________

A. ತುಂಬಾ ಶಕಿ ಬಂದಂತಾಯಿತು
B. ಚೀನಾದ ಸೋಲಿಗೆ ಕಾರಣ
C. ಮಿಲಿಟರಿ ಪಡೆಗಳಿಗೆ ತರಬೇತಿ
D. ಆರ್ಥಿಕ ಬೆಂಬಲ

4.ಯುನಿಸೆಫ್ ಸಂಸ್ಥೆಯ ಶುಭಾಶಯ ಪತ್ರಗಳ ಮಾರಾಟದ ಮೂಲಕ ಗಳಿಸುವ ಹಣವನ್ನು ಈ ಉದ್ದೇಶಕ್ಕಾಗಿ ಬಳಸುತ್ತಿದೆ .

A. ಮಕ್ಕಳ ಯೋಗ ಕ್ಷೇಮಕ್ಕಾಗಿ
B. ಮಹಿಳೆಯರ ಯೋಗ ಕ್ಷೇಮಕ್ಕಾಗಿ
C. ಕಾರ್ಮಿಕರ ಕಲ್ಯಾನಕ್ಕಾಗಿ
D. ಆರ್ಥಿಕ ಹಿಂದುಳಿದ ಜನರ ಕಲ್ಯಾಣಕ್ಕೆ

5.ಬಾಲಕಾರ್ಮಿಕರ ಸಮಸ್ಯೆಗೆ ಮುಖ್ಯ ಕಾರಣ _________

A. ಪೌಷ್ಟಿಕ ಆಹಾರದ ಕೊರತೆ
B. ಕಡುಬಡತನ
C. ಅನಾರೋಗ್ಯ
D. ಅಜ್ಞಾನ

6.ಈ ಕೆಳಗಿನ ನಕ್ಷೆಯಲ್ಲಿ ಗುರುತಿಸಿದ ನದಿಗಳನ್ನು ಸರಿಯಾಗಿ ಹೋಲಿಸಿ .

A. 1.ನರ್ಮದಾ 2.ತುಂಗಭದ್ರಾ 3.ಗಂಗಾ 4.ಕೋಸಿ
B. 1.ನರ್ಮಾದಾ 2.ಗಂಗಾ 3.ಕೋಸಿ 4.ತುಂಗಭದ್ರಾ
C. 1.ಗಂಗಾ 2.ನರ್ಮದಾ 3.ತುಂಗಭದ್ರಾ 4.ಕೋಸಿ
D. 1.ಕೋಸಿ 2.ಗಂಗಾ 3.ನರ್ಮದಾ 4.ತುಂಗಭದ್ರಾ



7.ಭಾರತದ ಪ್ರಮುಖ ನಾರಿನ ಬೆಳೆಗಳು __________

A. ಹೊಗೆಸೊಪ್ಪು –ಕಬ್ಬು
B. ಭತ್ತ ಮತ್ತು ಗೋಧಿ
C. ಹತ್ತಿ ಮತ್ತು ಸೆಣಬು
D. ಚಹಾ ಮತ್ತು ಕಾಫಿ

8.ರಾಷ್ಟ್ರೀಯ ಆದಾಯದ ಮೂಲಕ ಅಭಿವೃದ್ಧಿಯನ್ನು ಅಳೆಯುವುದು ಸಮಂಜಸವಲ್ಲ ಕಾರಣ ___________

A. ಆದಾಯವು ಜನರ ನಡುವೆ ಹೇಗೆ ಹಂಚಿಕೆಯಾಗುವುದು ಎಂದು ತಿಳಿಸುವುದಿಲ್ಲ .
B. ದೇಶದ ಆರ್ಥಿಕ ಪರಿಸ್ಥಿತಿಯು ಹದಗೆಡುತ್ತದೆ.
C. ಒಂದು ದೇಶದಲ್ಲಿ ರಾಷ್ಟ್ರೀಯ ಆದಾಯ ಹೆಚ್ಚಾದಂತೆ ಜನಸಂಖ್ಯೆ ಯಲ್ಲಿ ಹೆಚ್ಚಳವಾದರೆ ಆರ್ಥಿಕ ಅಭಿವೃದ್ಧಿಯು ಸಾಧ್ಯವಾಗುವುದಿಲ್ಲ .
D. ಕೃಷಿಯೇತರ ಚಟುವಟಿಕೆಗಳು ಬದಲಾವಣೆಯಾಗುತ್ತದೆ .

9.ಬ್ಯಾಂಕಿನಲ್ಲಿ ದಿನಕ್ಕೆ ಎಷ್ಟು ಬೇಕಾದರೂ ವ್ಯವಹರಿಸಬಹುದಾದ ಖಾತೆ__________

A. ಠೇವಣಿ ಖಾತೆ
B. ಉಳಿತಾಯ ಖಾತೆ
C. ಚಾಲಿ ಖಾತೆ
D. ನಿಶ್ಚಿತ ಠೇವಣಿ ಖಾತೆ

10.ಜಿಲ್ಲಾ ಕೈಗಾರಿಕಾ ಕೇಂದ್ರವನ್ನು __________ರಲ್ಲಿ ಸ್ಥಾಪಿಸಲಾಯಿತು.

A. 1988
B. 1979
C. 1985
D. 1978

ಆ. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.1*14=14

1. ಜನಪದ ಚರಿತ್ರೆಯಲ್ಲಿ ದಾಖಲೆಗಳೇ ಮುಖ್ಯವಲ್ಲ ಏಕೆ?
2. ಹೈದರಾಬಾದ್ ನಿಜಾಮ ಭಾರತದ ಒಕ್ಕೂಟದೊಂದಿಗೆ ಸೇರಲು ಒಪ್ಪಲಿಲ್ಲ ಏಕೆ?
3. ಎರಡನೆ ಮಹಾಯುದ್ಧದಲ್ಲಿ ಅಮೇರಿಕಾ ಜಪಾನಿನ ಮೇಲೆ ಅಣುಬಾಂಬ್ ಧಾಳಿ ಮಾಡಲು ಕಾರಣ ವೇನು ?

4. ಕರ್ನಾಟಕ ಸ್ಥಳೀಯ ಸಂಸ್ಥೆಗಳಲ್ಲಿ ಸ್ತ್ರೀಯರಿಗೆ ಶೇ 33 ಮೀಸಲಾತಿ ನೀಡುವ ಮೂಲ ಕಾರಣವೇನು ?
5. ಸಾರ್ಕ್ ಸಮಸ್ಥೆಯ ಪ್ರಗತಿಗೆ ತೊಡಕಾಗಿರುವ ಅಂಶ ಯಾವುದು ?
6. ಗರ್ಭದಲ್ಲಿರುವ ಮಗುವಿನ ಲಿಂಗ ಕಂಡುಕೊಳ್ಳುವಿಕೆ ಕಾನೂನು ಬಾಹಿರ ಏಕೆ ?
7. ಸಾಮಾಜಿಕ ಸ್ತರವಿನ್ಯಾಸ ಎಂದರೇನು ?
8. ಬೇಸಿಗೆ ಕಾಲದಲ್ಲಿ ಉತ್ತರ ಭಾರತದಲ್ಲಿ ಉಷ್ಣಾಂಶ ಹೆಚ್ಚಾಗಿರಲು ಕಾರಣವೇನು ?
9. ಖಾರಿಫ್ ಬೇಸಾಯ ವೆಂದರೇನು ?
10. ಅಭ್ರಕವನ್ನು ಟೆಲಿಫೋನ್ ಗಳಲ್ಲಿ ಹೆಚ್ಚಾಗಿ ಬಳಸುತ್ತಾರೆ ಏಕೆ ?
11. ಗಂಗಾ ನದಿ ಬಯಲು ಪ್ರದೇಶದಲ್ಲಿ ಸಕ್ಕರೆ ಕೈಗಾರಿಕೆ ಹೆಚ್ಚು ಕೇಂದ್ರೀಕೃತ ವಾಗಿದೆ,ಏಕೆ?
12. ತಲಾ ಆದಾಯವು ಅಭಿವೃದ್ಧಿಯ ನೈಜ್ಯಮಾಪಕ ವಾಗಲಾರದು ಏಕೆ ?
13. ಕೊರತೆ ಆಯವ್ಯಯದ ಅರ್ಥವನ್ನು ಬರೆಯಿರಿ.
14. ಉದ್ಯಮ ಎಂದರೇನು ?

ಇ. ಈ ಕೆಳಗಿನ ಪ್ರಶ್ನೆಗಳಿಗೆ ಎರಡು ಮೂರು ವಾಕ್ಯದಲ್ಲಿ ಉತ್ತರಿಸಿರಿ .2*15=30

1. ಸಮುದ್ರಯಾನಕ್ಕೆ ವೈಜ್ಞಾನಿಕ ಬೆಳವಣಿಗೆಯು ಕಾರಣ ಈ ಹೇಳಿಕೆಯನ್ನು ಸಮರ್ಥಿಸಿರಿ.
2. ಎರಡನೇ ಮೈಸೂರು ಯುದ್ಧಕ್ಕೆ ಕಾರಣವೇನು ?
3. ಆಲಿಘರ್ ಚಳುವಳಿಯ ಉದ್ದೇಶವೇನು ?
4. ಚೀನಾ ಕ್ರಾಂತಿಯ ಪರಿಣಾಮವೇನು ?
5. ಸಾಕರತೆಯನ್ನು ವೃದ್ಧಿಸಲು ಕೈಗೊಂಡಿರುವ ಕ್ರಮಗಳೇನು ?
6. ಭಯೋತ್ಪಾದನೆಯಿಂದ ಉಂಟಾಗುವ ಪರಿಣಾಮಗಳೇನು ?
7. ಜನಮಂದೆ ಎಂದರೇನು ?ಉದಾ ಕೊಡಿ
8. ಪೂರ್ವ ಮತ್ತು ಪಶ್ಚಿಮ ಘಟ್ಟಗಳಿಗೆ ಇರುವ ವ್ಯತ್ಯಾಸವೇನು ?
9. ಮಣ್ಣಿನ ಸವೆತದ ಪರಿಣಾಮವೇನು ?
10. ಅರಣ್ಯ ಸಂರಕ್ಷಣೆಯ ವಿಧಾನಗಳಾವುವು ?
11. ಜಿ.ಪಿ.ಎಸ್ ತಂತ್ರಜ್ಞಾನವು ಇಂದು ಅತೀ ಹೆಚ್ಚು ಉಪಯುಕ್ತತೆಯನ್ನು ಹೊಂದಿದೆ ಸಮರ್ಥಿಸಿ
12. ಪ್ರವಾಹಗಳು ಉಂಟಾಗಲು ಕಾರಣವೇನು ?
13. ಜನರ ಪಟ್ಟಣ ವಲಸೆಯು ಅನೇಕ ಸಮಸ್ಯೆಗಳನ್ನು ಉಂಟುಮಾಡುತ್ತಿದೆ. ಸಮರ್ಥಿಸಿ
14. ಪಂಚವಾರ್ಷಿಕ ಯೋಜನೆಯ ಉದ್ದೇಶವೇನು ?
15. ಜಾಗತೀಕರಣವು ಹಲವು ನಕಾರಾತ್ಮಕ ಪರಿಣಾಮವನ್ನು ಉಂಟುಮಾಡುತ್ತದೆ ಹೇಗೆ ?

ಈ. ಕೆಳಗಿನ ಪ್ರಶ್ನೆಗಳಿಗೆ ಐದು ಆರು ವಾಕ್ಯದಲ್ಲಿ ಉತ್ತರಿಸಿರಿ .6*3=18

1. 1857 ರ ದಂಗೆ ವಿಫಲವಾಯಿತು ಎಂದು ಹೇಗೆ ಸಮರ್ಥಿಸುವಿರಿ .

ಅಥವಾ

ಇಂಗ್ಲೇಂಡಿನಲ್ಲಾದ ಕೈಗಾರಿಕಾ ಕ್ರಾಂತಿಯು ಭಾರತದ ಅರ್ಥವ್ಯವಸ್ಥೆಯ ಗಂಭೀರ ಪರಿಣಾಮ ಬೀರಿತು. ಸಮರ್ಥಿಸಿ.

2.ಪಂಚಶಿಲ ತತ್ವಗಳಾವುವು ?

ಅಥವಾ

ಭಾರತದ ಮತ್ತು ಅಮೇರಿಕಾದ ನಡುವೆ ಪರಸ್ಪರ ಸೌಹಾರ್ದತೆಯು ಹೇಗಿದೆ ವಿವರಿಸಿರಿ

3.ಅಸ್ಪೃಶ್ಯತೆ ನಿವಾರಣೆ ಸಂವಿಧಾನಾತ್ಮಕ ಮತ್ತು ಶಾಸನಾತ್ಮಕ ಕ್ರಮಗಳನ್ನು ವಿವರಿಸಿ.

ಅಥವಾ

ಸಂಘಟಿತ ಮತ್ತು ಅಸಂಘಟಿತ ಕೆಲಸಗಾರರ ನಡುವಿನ ವ್ಯತ್ಯಸಗಳಾವುವು ?

4. ರಸ್ತೆ ಸಾರಿಗೆಯ ತೊಡಕುಗಳಾವುವು ?

ಅಥವಾ

ಕೈಗಾರಿಕೆಗಳ ಸ್ಥಾನೀಕರಣದ ಮೇಲೆ ಪ್ರಭಾವ ಬೀರುವ ಅಂಶವೇನು ?

5.ಗ್ರಾಮೀಣ ಅಭಿವೃದ್ಧಿಯ ಮಹತ್ವವೇನು?

ಅಥವಾ

ಸಾರ್ವಜನಿಕ ಹಣಕಾಸು ಮತ್ತು ವೈಯ್ಯಕ್ತಿಕ ಹಣಕಾಸು ನಡುವಿನ ಭಿನ್ನತೆಯನ್ನು ತಿಳಿಸಿ .

6.ಬ್ಯಾಂಕ್ ನಿರ್ವಹಿಸುವ ಕಾರ್ಯಗಳಾವುವು ?

ಅಥವಾ

ವಿಮಾ ಸಂಸ್ಥೆಯಿಂದಾಗುವ ಪ್ರಯೋಜನಗಳಾವುವು ?

ಉ.ಕೆಳಗಿನ ಪ್ರಶ್ನೆಗೆ ಹತ್ತುವಾಕ್ಯದಲ್ಲಿ ಉತ್ತರಿಸಿರಿ.4*1=4

ಸ್ವಾತಂತ್ರ್ಯಾ ಹೋರಾಟದಲ್ಲಿ ಸುಭಾಷ್ಚಂದ್ರ ಬೋಸ್ರವರ ಸಾಧನೆಗಳನ್ನು ಬರೆಯಿರಿ.

ಊ. ಭಾರತದ ನಕಾಶೆ ಬರೆದು, ಈ ಕೆಳಗಿನ ಪ್ರದೇಶವನ್ನು ಗುರುತಿಸಿರಿ .4*1=4

1. 82 ½ *ಪೂರ್ವ ರೇಖಾಂಶ
2. ಕೈಗಾ
3. ಪಂಪಸಾಗರ